# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5015/2024 ಫ್ರಾಸಾ-8
ಚಾಸಾ-13

ದಿನಾಂಕ: 11-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗುರುನಾಥ |
| **ತಂದೆಯ / ಗಂಡನ ಹೆಸರು** | ಬಂಗಲಾನಾಯಕ್ |
| **ವಯಸ್ಸು** | 59 ವರ್ಷ |
| **ಉದ್ಯೋಗ** | PSI ಬಡವನಹಳ್ಳಿ |
| **ವಾಸಸ್ಥಳ** | ಬಡವನಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು ದಿನಾಂಕ 30.04.2020 ರಿಂದ 08.04.2025 ರವರೆಗೆ PSI ಆಗಿ ಪಾವಗಡ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 07.07.2023 ರಂದು ಈ ಪ್ರಕರಣದಲ್ಲಿ HC 351 ಚಾಸಾ. 12 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದು, ಇದುವರೆಗೂ ಆದ ತನಿಖೆಯನ್ನು ಪರಿಶೀಲಿಸಿ, ಚಾಸಾ.2 ರವರ ಗಾಯದ ಪ್ರಮಾಣ ಪತ್ರ ಕೋರಿ ಸರ್ಕಾರಿ ಆಸ್ಪತ್ರೆ, ಪಾವಗಡ ವೈದ್ಯರಿಗೆ ಮನವಿ ಸಲ್ಲಿಸಿರುತ್ತೇನೆ.

ದಿನಾಂಕ 11.07.2023 ರಂದು PC -762 ಮಹೇಂದ್ರರವರು ಗಾಯದ ಪ್ರಮಾಣ ಪತ್ರ ತಂದು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-4 ಗಾಯದ ಪ್ರಮಾಣ ಪತ್ರದ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಆರೋಪಿಯು ಚಾಸಾ.2 ರವರ ಮೇಲೆ ಮಾರಣಾಂತಿಕ ಹಲ್ಲೆ

ಮಾಡಿದ್ದರಿಂದ ಕಲಂ 307 ಸೇರ್ಪಡೆ ಮಾಡಲು ನ್ಯಾಯಾಧೀಶರಿಗೆ ದಿನಾಂಕ 11.07.2023 ರಂದು ಮನವಿ ಕೊಟ್ಟಿದ್ದು, ಅದೇ ದಿನ ನ್ಯಾಯಾಧೀಶರು ಪರವಾನಗಿ ನೀಡಿರುತ್ತಾರೆ. ನ್ಯಾಯಾಲಯದಲ್ಲಿರುವ ಸದರಿ ಮನವಿ ಪತ್ರವನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ದಿನಾಂಕ 13.07.2023 ರಂದು ಚಾಸಾ.9 ಮತ್ತು ಸಂಪತ್ ಕುಮಾರ್ ರವರನ್ನು ಆರೋಪಿತರ ಪತ್ತೆಗಾಗಿ ನೇಮಕ ಮಾಡಿದ್ದು, ಅವರುಗಳು ಅದೇ ದಿನ ಬೆಳಿಗ್ಗೆ 10.00 ಗಂಟೆಗೆ ಆರೋಪಿಯನ್ನು ದೊಮ್ಮತ್ತಮರಿ ಬಸ್ ಸ್ಟ್ಯಾಂಡ್ ನಲ್ಲಿ ಆರೋಪಿಯನ್ನು ವಶಕ್ಕೆ ಪಡದು ನನ್ನ ಮುಂದೆ ಬೆಳಿಗ್ಗೆ 11.30 ಗಂಟೆಗೆ ಆರೋಪಿಯನ್ನು ಹಾಜರುಪಡಿಸಿರುತ್ತಾರೆ. ಆರೋಪಿಯನ್ನು ವಿಚಾರಣೆ ಮಾಡಿ, ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ದಸ್ತಗಿರಿ ಕ್ರಮವನ್ನು ಅನುಸರಿಸಿ, ದಸ್ತಗಿರಿ ಮಾಡಿ, ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ದಿನಾಂಕ 13.07.2023 ರಂದು ಆರೋಪಿತರು ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ತಾನು ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಯನ್ನು ಹಾಜರುಪಡಿಸುತ್ತೇನೆ ಎಂದು ಹೇಳಿ ಬ್ಯಾಗಿನಿಂದ ಒಂದು ಶರ್ಟ ಮತ್ತು ಪ್ಯಾಂಟ ತಂದು ಹಾಜರುಪಡಿಸಿದ್ದು, ಸದರಿ ಬಟ್ಟೆಗಳನ್ನು ಚಾಸಾ.3 ಮತ್ತು 4 ರವರ ಸಮಕ್ಷಮ ನಿಪಿ.5 ರಂತೆ ಪಂಚನಾಮೆ ಮಾಡಿ ಅಮಾನತು ಪಡಿಸಿಕೊಂಡು ಪಂಚರ ಸಹಿ ತೆಗೆದುಕೊಂಡಿರುತ್ತೇನೆ. ನಿಪಿ-5 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ MO.4 ಮತ್ತು 5 ಎಂದು ಗುರುತಿಸಲಾಗಿದೆ. ಅಮಾನತು ಪಡಿಸಿದ ವಸ್ತುಗಳನ್ನು ಮಾಲು ಪಟ್ಟಿ ಸಂಖ್ಯೆ 141/2023 ನಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯದ ಪರವಾನಗಿ ಪಡೆದುಕೊಂಡಿರುತ್ತೇನೆ.

ದಿನಾಂಕ 04.09.2023 ರಂದು ಈ ಪ್ರಕರಣದ ಗಾಯಾಳು ಚಾಸಾ.2 ಠಾಣೆಗೆ ಹಾಜರಾಗಿ ಕೃತ್ಯ ನಡೆದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಪಂಚರಾದ ಚಾಸಾ 3 ಮತ್ತು 4 ರವರ ಸಮಕ್ಷಮ ನಿಪಿ3 ರಂತೆ ಮಧ್ಯಾಹ್ನ 12.15 ರಿಂದ 1.15

ರವರೆಗೆ ಮಾಡಿ ಬಟ್ಟೆಗಳನ್ನು ಅಮಾನತು ಪಡಿಸಿಕೊಂಡಿರುತ್ತೇನೆ. ನಿಪಿ-3 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ MO.2 ಮತ್ತು 3 ಎಂದು ಗುರುತಿಸಲಾಗಿದೆ. ಅಮಾನತು ಪಡಿಸಿದ ವಸ್ತುಗಳನ್ನು ಮಾಲು ಪಟ್ಟಿ ಸಂಖ್ಯೆ 163/2023 ನಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯದ ಪರವಾನಗಿ ಪಡೆದುಕೊಂಡಿರುತ್ತೇನೆ.

ದಿನಾಂಕ 11.09.2023 ರಂದು ತನಿಖಾ ಕಾಲದಲ್ಲಿ ವಶಪಡಿಸಿದ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚಾಸಾ.10 ರವರ ಮುಖಾಂತರ FSL ಗೆ ಕಳುಹಿಸಿರುತ್ತೇನೆ. ದಿನಾಂಕ 12.09.2023 ರಂದು ಚಾಸಾ 10 ರವರು ನಿಪಿ 7 ರಂತೆ ಸ್ವೀಕೃತಿಯನ್ನು ಹಾಜರುಡಿಸಿರುತ್ತಾರೆ. ನಿಪಿ-7 ನೋಡಿ ಗುರುತಿಸಿರುತ್ತಾರೆ. ದಿನಾಂಕ 29.09.2023 ರಂದು FSL ವರದಿಯನ್ನು FLMS ತಂತ್ರಾಂಶದಿಂದ ಪಡೆದುಕೊಂಡಿರುತ್ತೇನೆ. ನ್ಯಾಯಾಲಯದಲ್ಲಿರುವ FSL ವರದಿ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ದಿನಾಂಕ 07.07.2023 ರಂದು ಚಾಸಾ 2 ರವರ ರಕ್ತದ ವರ್ಗೀಕರಣ ಗುಂಪಿನ ವರದಿಯನ್ನು ಪಾವಗಡ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ನ್ಯಾಯಾಲಯದಲ್ಲಿರುವ ರಕ್ತದ ವರ್ಗೀಕರಣ ಗುಂಪಿನ ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-10 ಎಂದು, ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ದಿನಾಂಕ 16.11.2023 ರಂದು ಆರೋಪಿತರ ಮೇಲೆ ಆರೋಪಿ ದೃಢಪಟ್ಟಿದ್ದರಿಂದ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಶ್ರೀ. PCKR ವಕೀಲರಿಂದ ಆರೋಪಿ ಪರವಾಗಿಃ-</u>**

ದಿನಾಂಕ 07.07.2023 ರಂದು ಬೆಳಿಗ್ಗೆ 10.00 ಗಂಟೆಗೆ ಈ ಪ್ರಕರಣವನ್ನು ಕೈಗೆತ್ತಿಕೊಂಡಿರುತ್ತೇನೆ. ಚಾಸಾ.9 ಮತ್ತು ಸಂಪತ್ ಕುಮಾರ್ ರವರು ಆರೋಪಿಯನ್ನು ತಮ್ಮ ವಶಕ್ಕೆ ದೊಡ್ಡತಮ್ಮರಿ ಬಸ್ಟ್ಯಾಂಡ್ ನಲ್ಲಿ ಪಡೆದುಕೊಂಡಿರುವುದಿಲ್ಲ ಮತ್ತು ನನ್ನ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಸ್ವಇಚ್ಛಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಪ್ಯಾಂಟ್ ಶರ್ಟ ಗಳನ್ನು ಹಾಜರುಪಡಿಸಿರುವುದಿಲ್ಲ, ನಿಪಿ.5 ಪಂಚನಾಮೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. MO 4, 5 ಆರೋಪಿಗೆ ಸಂಬಂಧಿಸಿದ ಬಟ್ಟೆಗಳಲ್ಲ ಎಂದರೆ ಸರಿಯಲ್ಲ. ಚಾಸಾ 2 ಠಾಣೆಗೆ ಹಾಜರಾಗಿ ಬಟ್ಟೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.3 ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಲ್ಲ ಎಂದರೆ ಸರಿಯಲ್ಲ. MO 2 ಮತ್ತು 3 ಚಾಸಾ 2 ರವರಿಗೆ ಸಂಬಂಧಿಸಿಲ್ಲ, ಅದರ ಮೇಲೆ ಯಾವುದೇ ಗುರುತುಗಳು ಇರುವುದಿಲ್ಲ ಎಂದರೆ ಸರಿಯಲ್ಲ. FSL ಗೆ ನಾನು ಯಾವುದೇ ವಸ್ತುಗಳನ್ನು ಕಳುಹಿಸಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಪೋಲೀಸರೊಂದಿಗೆ ಪಾವಗಡ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತದೆ. ನಿಪಿ 4 ಗಾಯದ ಪ್ರಮಾಣ ಪತ್ರವನ್ನು ಪೊಲೀಸರೊಂದಿಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಿಪಿ 4 ಗಾಯದ ಪ್ರಮಾಣ ಪತ್ರ ಸೃಷ್ಟಿಸಿ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ರಾಜಕೀಯ ಒತ್ತಾಯದ ಮೇರೆಗೆ ಆರೋಪಿತನ ವಿರುದ್ಧ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕಬ್ಬಿಣದ ಪೈಪು ಮತ್ತು ಕಬ್ಬಿಣದ ಸಲಾಕೆ ಬೇರೆ ಬೇರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**

**ಈ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಯನ್ನು ಕಲಂ.299 Cr.P.C., ಅಡಿಯಲ್ಲಿ ಮಾಡಿದ್ದರಿಂದ ಪಾಟೀಸವಾಲು ಇರುವುದಿಲ್ಲ.**

**U/sec.299 Cr.P.C., ಅಡಿಯಲ್ಲಿ ಸಾಕ್ಷಿಯನ್ನು ಕರೆಸಿ ವಿಚಾರಣೆ ಮಾಡಲಾಯಿತು.**